


International Journal of Kannada Research
www.kannadajournal.com

ISSN: 2454–5813
IJSR 2017; 3(1): 79-83
© 2017 IJKS
www.kannadajournal.com
Received: 13-11-2016
Accepted: 14-12-2016

**ಸದಾಶಿವಯ್ಯ ಎಸ್. ಪಲ್ಲೇದ**
ಸ.ಪ.ಪೂ.ಕಾಲೇಜ, ಕುಶಾಲನಗರ, ಸೋಮವಾರಪೇಟೆ, ಕೊಡಗು ಜಿಲ್ಲೆ

**ಸಂಶೋಧನಾ ವಿದ್ಯಾರ್ಥಿ**
ಜಾನಪದ ಹಾಗೂ ಬುಡಕಟ್ಟು ಅಧ್ಯಯನ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ

**Correspondence**
**ಸದಾಶಿವಯ್ಯ ಎಸ್. ಪಲ್ಲೇದ**
ಸ.ಪ.ಪೂ.ಕಾಲೇಜ, ಕುಶಾಲನಗರ, ಸೋಮವಾರಪೇಟೆ, ಕೊಡಗು ಜಿಲ್ಲೆ

# ಮಕ್ಕಳ ಅನುಕರಣೆ ಆಟಗಳು

**ಸದಾಶಿವಯ್ಯ ಎಸ್. ಪಲ್ಲೇದ, ಸಂಶೋಧನಾ ವಿದ್ಯಾರ್ಥಿ**

ಆಧುನಿಕ ಜಗತ್ತಿನಲ್ಲಿ ಕೇವಲ ಯಾಂತ್ರೀಕರಣಗೊಳ್ಳುತ್ತಿರುವ ಇಂದಿನ ದಿನಮಾನಗಳಲ್ಲಿ ಗ್ರಾಮೀಣ ಆಟಗಳು ಕಣ್ಮರೆಯಾಗುತ್ತಿವೆ. ಈಗಿನ ಮಕ್ಕಳಿಗೆ ಆಟಗಳೆಂದರೆ ಕಂಪ್ಯೂಟರ್, ಲ್ಯಾಪ್ ಟಾಪ್ ಮತ್ತು ಮೊಬೈಲ್‌ನಲ್ಲಿ ಬರುವ ಆಟಗಳನ್ನು ಆಟಗಳೆಂದು ಭಾವಿಸಿದಂತಿದೆ. ಆದರೆ ಅವು ಮಿದುಳಿಗೆ ಕೆಲಸ ನೀಡುವ ಆಟಗಳೇ ಹೊರತು, ಮನಸ್ಸು ಮತ್ತು ದೇಹಕ್ಕೆ ಆನಂದವನ್ನು ನೀಡುವಂತಹ ಆಟಗಳಾಗಿರುವುದಿಲ್ಲ. ಹಾಗೂ ಮಗು ಸಾಮಾಜಿಕವಾಗಿ ಬೆಳವನಿಗೆಗೆ ಸಹಕಾರಿಯಾಗುವುದಿಲ್ಲ. ಆದರೆ ಜನಪದ ಆಟಗಳು ಮಗುವಿನ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯ ಕಾಪಾಡುವಲ್ಲಿ ಪಾತ್ರವಹಿಸುತ್ತವೆ. ಹಾಗೂ ಮಕ್ಕಳನ್ನು ಆಟಗಳ ಮೂಲಕ ಸಾಮಾಜಿಕರಣದತ್ತ ಸಾಗಿಸುತ್ತಾ ಬಂದಿದೆ. ಈ ನಿಟ್ಟಿನಲ್ಲಿ ಸಾಮಾಜಿಕ ಸಂವಹನ ಕ್ರಿಯೆಗಳನ್ನು ಮಕ್ಕಳ ಅನುಕರಣೆ ಆಟಗಳಲ್ಲಿ ಕಾಣಬಹುದಾಗಿದೆ.

ತಮ್ಮ ಸುತ್ತಮುತ್ತ ಮಕ್ಕಳು ನೋಡಿದ ಸಾಮಾಜಿಕ ಆಚರಣೆಗಳು, ಸಂಪ್ರದಾಯಗಳು, ಹಿರಿಯರು ತೊಡಗಿಸಿಕೊಂಡ ಕೆಲಸ ಕಾರ್ಯಗಳನ್ನು ವೀಕ್ಷಿಸಿ ಗ್ರಹಿಸಿ ನೋಡಿದ್ದನ್ನು ಯಥಾವತ್ತಾಗಿ ಅನುಕರಿಸಿ ಆಡುವ ಆಟಗಳು ಅನುಕರಣೆ ಆಟಗಳಾಗಿವೆ. ಮಗುವಿನ ಸ್ವಲೀನತೆಯನ್ನು (ಸಮಸ್ಯೆ) ಕೈಬಿಡಿಸಿ ಸಾಮಾಜಿಕರಣಗೊಳಿಸುವ ಮಹತ್ವದ ಚಿಕಿತ್ಸೆ ರೂಪದ ಕಾರ್ಯವನ್ನು ಈ ಜನಪದ ಆಟಗಳು ನಡೆಸಿಕೊಂಡು ಬಂದಿವೆ. ಇದು ಸಹಜಸಿದ್ಧ ಕ್ರಿಯೆ ಆಗಿದೆ. ಅನುಕ್ರಿಯೆಗಳನ್ನು ಮಾತಿನ ಜವಾಬ್ದಾರಿಕೆಯಿಂದ ಮಗು ಇಲ್ಲಿ ಕಲಿಯುತ್ತದೆ. ದೊಡ್ಡವರ ಮತ್ತು ಸಣ್ಣವರ ಜೊತೆಗೆ ಹೇಗೆ ಮಾತನಾಡಬೇಕು ಎಂಬುದನ್ನು ತಾನು ಆಡುವ ಆಟಗಳೊಂದಿಗೆ ರೂಢಿಸಿಕೊಳ್ಳುತ್ತದೆ. ಇದರಿಂದ ಮಗು ಮಾತಿನಲ್ಲಿ ಔಪಚಾರಿಕತೆ ತಿಳಿದು, ಗೌರವದಿಂದ ಹೇಗೆ ನಡೆದುಕೊಳ್ಳಬೇಕು ಎಂಬುದರ ಮಹತ್ವದ ಅರಿವು ಆಗುತ್ತದೆ. ಮಕ್ಕಳಿಗೆ ಸಾಮಾಜಿಕರಣದ ಪ್ರಕ್ರಿಯೆಯ ಅರಿವು ಮೂಡಿಸುವುದೇ ಈ ಆಟಗಳ ಪ್ರಮುಖ ಉದ್ದೇಶವಾಗಿರುತ್ತದೆ. ಮಕ್ಕಳಲ್ಲಿ ಕಂಡುಬರುವ ಸಾಮಾಜಿಕ ಸ್ವಲೀನತೆಯನ್ನು (ಆ್ಯಟೀಸಂ) ಸುಲಭವಾಗಿ ಆಟಗಳ ಮೂಲಕ ಪರಿಹರಿಸಿ, ಅವರಿಗೆ ಸಾಮಾಜಿಕ ಸ್ಥಾನಮಾನಗಳ ಮಹತ್ವವನ್ನು ತಿಳಿಸಿಕೊಡುವ ಪ್ರಯತ್ನವನ್ನು ಈ ಜನಪದ ಆಟಗಳು ಮಾಡುತ್ತವೆ. ಇಬ್ಬರು ವ್ಯಕ್ತಿ ಮತ್ತು ಗುಂಪಿನಲ್ಲಿ ನಡೆದುಕೊಳ್ಳುವ ಕ್ರಿಯೆಯನ್ನು ಮಗು ತಿಳಿಯುತ್ತದೆ. ಪ್ರಸಾಂಗಾವಧಾನತೆ ಎದುರಿಸುತ್ತಿರುವ ಮತ್ತು ಆಯಾಯಾ ಸಂದರ್ಭಗಳ ಕುರಿತಾಗಿ ಹೊಂದುವ ಸ್ಪಷ್ಟವಾದ ಅರಿವು ಮತ್ತು ಪರಿಹಾರದ ರೀತಿಯ ಕ್ರಿಯೆಗಳು ಮಗುವಿಗೆ ತಿಳಿಯುತ್ತವೆ.

ಮಗು ಇನ್ನೂ ಕುಳಿತುಕೊಳ್ಳುವ ಮುಂಚೆ ಆಟ ಆಡುವುದನ್ನು ಕಲಿಯುತ್ತದೆ. ಮಗು ಗೊಂಬೆಯನ್ನು ಎತ್ತಿಕೊಂಡು ತದೇಕ ಚಿತ್ತದಿಂದ ನೋಡಿ ಅತ್ತಿತ್ತ ಹೊರಳಾಡಿಸಿ, ನೆಲಕ್ಕಪ್ಪಳಿಸಿ ಶಬ್ದ ಮಾಡುತ್ತದೆ, ಇಲ್ಲದಿದ್ದರೆ ಆ ವಸ್ತುವನ್ನು ಎಳೆದು, ಹೊಡೆದು ನಾಶ ಮಾಡುತ್ತದೆ,(೧) ಈ ಬಗೆಯ ಕ್ರಿಯೆಯನ್ನು ಕಾರ್ಲ್‌ಗ್ರೋಸ್ (Karl gross) ರವರು ಮೊದಲ ಹಂತದ ಆಟ ಎನ್ನುತ್ತಾರೆ. ಇಂತಹ ಆಟಗಳನ್ನು ಶೋಧನ–ಪರೀಕ್ಷೆ ಆಟಗಳೆಂದು (Games of Experiment) ಕರೆಯಲಾಗಿದೆ. ಇಂತಹ ಆರಂಭದ ಹಂತದಲ್ಲಿ ಕಂಡು ಬರುವ ಆಟಗಳನ್ನು ಆಟಗಳು ಎನ್ನುವುದು ಸೂಕ್ತ ಅಲ್ಲ. ಅವು ಕೇವಲ ಕ್ರಿಯೆಗಳಾಗಿವೆ. ಈ ಕ್ರಿಯೆಗಳು ರಚನಾತ್ಮಕವಾದವುಗಳಲ್ಲ. ಕುಳಿತುಕೊಳ್ಳಲು ಕಲಿತ ಮಗು ಮುಂದೆ ಸ್ವಲ್ಪ ತಿಂಗಳುಗಳ ನಂತರ ನಡೆದಾಡುವುದನ್ನು ಮತ್ತು ಓಡಾಡುವುದನ್ನು ಕಲಿಯುತ್ತದೆ. ಆಗ ಮಗುವಿಗೆ ಅಜ್ಜಿ/ತಾತನ ಮೂಗು ಹೇಗಿದೆ ಎಂದು ಕೇಳಿದರೆ, ತನ್ನ ಮೂಗು ಮೇಲಕ್ಕೆರಿಸಿ ತೊರಿಸುತ್ತದೆ, ಹಾಗೆಯೇ ಕಣ್ಣು ಎಂದಾಗ ಅರ್ಧ ಕಣ್ಣು ಮುಚ್ಚಿ ತೋರಿಸುತ್ತದೆ, ತಲೆ ಎಂದಾಗ ತಲೆಯ ಮೇಲೆ ಕೈಯಿಟ್ಟುಕೊಳ್ಳುತ್ತದೆ. ಮಗು ಹೀಗೆ ಮಾಡುವ ಕ್ರಿಯೆಯನ್ನು 'ಅಣಕ' ಎನ್ನಬಹುದು, ಆದರೆ ಅನುಕರಣೆ

ಅಲ್ಲ. ಮಗು ಒಂದು ಗೊಂಬೆಯನ್ನು ತೆಗೆದುಕೊಂಡು ತಾಯಿ ಸೆರಗು ಮುಚ್ಚಿ ಮೊಲೆಯುಣಿಸುವಂತೆ, ಅಳುವಾಗ ಅದನ್ನು ಸಮಾಧಾನ ಮಾಡುವಂತೆ ನಟಿಸುತ್ತದೆ. ಇದನ್ನು ಅನುಕರಣೆ ಎನ್ನುತ್ತೇವೆ. ಇವುಗಳಿಗೆ ಕಾರ್ಲ್‌ಗ್ರೋಸ್‌ರವರು 'ಭ್ರಮೆಯ ಆಟಗಳು' (Games of Ilustion) (೨)ಎಂದು ಕರೆದಿದ್ದಾರೆ.

ಅನುಕರಣೆ ಆಟದಲ್ಲಿ ಅನುಕರಣೆ ಮಾಡುವವರು ತಾವು ಯಾವ ಪಾತ್ರ ಮಾಡುತ್ತಿದ್ದೇವೆ ಎಂಬ ಅರಿವು ಸ್ಪಷ್ಟವಾಗಿ ಕಂಡುಬಂದುರೂ ಅದು ಕೆಲವು ಸಲ ಗೌಣವಾಗಿರುತ್ತದೆ. ಅಂದರೆ ಅನುಕರಣೆಗಳೇ ಆಟಕ್ಕೆ ತಿರುಗುವುದು ಕಂಡು ಬರುತ್ತದೆ. ಉದಾಹರಣೆಗೆ ಕಾಂಗರೂ ಹಾಗೆ ಓಡುವುದು ಅನುಕರಣೆಯಾದರೂ ಯಾರು ಮೊದಲು ಗುರಿ ಮುಟ್ಟುತ್ತಾರೆ ಎಂಬುದು ಸ್ಪರ್ಧೆ ಆಗಿದೆ. 'ಸ್ಪರ್ಧೆ ಬಂದಾಗ ಅನುಕರಣೀಯ ಪ್ರಜ್ಞೆಯು ಗೌಣವಾಗಿ ಸ್ಪರ್ಧಾ ಭಾವನೆ ಜಾಗೃತವಾಗುತ್ತದೆ.(೩) ಕೆಲವು ಸಲ ಸ್ಪರ್ಧೆ ಇಲ್ಲದೆ ಆಡಿಕೊಂಡು ಹೋಗುವ ಆಟಗಳುಂಟು. ಉದಾಹರಣೆಗೆ ರಥ ಆಟ, ಮಣ್ಣೆತ್ತುಗಳನ್ನು ಮಾಡುವುದು, ಹಂತಿ ಹೊಡೆಯುವುದು, ಕುದರೆ ಕುಣಿತ, ಮದುವೆ ಆಟ ಇತ್ಯಾದಿಗಳು. ಆದ್ದರಿಂದ ಸ್ಪರ್ಧೆಗಳಿರುವ ಕ್ರಿಯೆಗಳೇ ಆಟ ಎಂದಲ್ಲ. ಹಾಗೆಯೆ ಸ್ಪರ್ಧೆ ಇಲ್ಲದ ಎಲ್ಲಾ ಕ್ರಿಯೆಗಳನ್ನು ಆಟಗಳು ಎಂದು ಹೇಳಲು ಬರುವುದಿಲ್ಲ.ಅದು ಏನೇ ಇರಲಿ ಈ ಅನುಕರಣೆ ಆಟಗಳನ್ನು ಪ್ರದೇಶವಾರು ಪ್ರತ್ಯೇಕಿಸಿ ನೋಡಿದಾಗ ಮಾತ್ರ ಅಲ್ಲಿನ ಸಾಂಸ್ಕೃತಿಕ ಹಿನ್ನಲೆ ಸ್ವಲ್ಪಮಟ್ಟಿಗೆ ಅರ್ಥವಾಗಬಹುದು. ಜೊತೆಗೆ ಸುತ್ತ ಮುತ್ತಲಿನ ಪರಿಸರ,ಅಲ್ಲಿನ ನಂಬಿಕೆ, ಆಚರಣೆಗಳು, ಸಂಪ್ರದಾಯಗಳು ಇತ್ಯಾದಿ ವಿಚಾರಗಳ ಛಾಯೆ ಅಟಗಳಲ್ಲಿ ಕಂಡುಬರುತ್ತದೆ.ಇಂತಹ ಮಹತ್ವ ಪೂರ್ಣವಾದ ಅನುಕರಣೆ ಆಟಗಳಲ್ಲಿ ಕೆಲವು ಮುಖ್ಯವಾದ ಆಟಗಳನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

**ಅಂಗಡಿ ಆಟ:** ಈ ಆಟವು ಹೆಣ್ಣುಮಕ್ಕಳು ಹಾಗೂ ಗಂಡುಮಕ್ಕಳು ಸೇರಿ ಆಡುವ ಆಟವಾಗಿದೆ. ಈ ಆಟದಲ್ಲಿ ಒಂದು ಗಂಡು ಅಥವಾ ಹೆಣ್ಣು ಮಗು ಅಂಗಡಿ ಹಾಕುತ್ತಾರೆ. ಈ ಅಂಗಡಿಯಲ್ಲಿ ಸಾಮಾನ್ಯ ಅಂಗಡಿಯಲ್ಲಿ ಇರುವಂತೆ ಕಾಳುಗಳು, ಹಿಟ್ಟು, ಅಗರಬತ್ತಿ, ಸೋಪು, ಕಾಫಿಪುಡಿ, ಮತ್ತು ಮಕ್ಕಳ ಸಿಹಿತಿಂಡಿಗಳು ಎಲ್ಲವನ್ನು ತಮ್ಮಲ್ಲಿ ಸಿಗುವಂತ ವಸ್ತುಗಳಿಂದ ಅಂಗಡಿಯನ್ನು ಹಾಕುತ್ತಾರೆ. ಅಂದರೆ ಊರಿನ ಹೊರಗಿನ ಕುರುಚಲು ಪ್ರದೇಶದಲ್ಲಿ ಬೆಳೆಯುವ ಒಂದು ರೀತಿಯ ಕಾಡುಗಿಡ, ತೊಗಟೆ ಸೊಪ್ಪಿನ ಬೀಜಗಳನ್ನು ಬೇಳೆ ಎಂದು, ಸಣ್ಣ ಸಣ್ಣ ಉದ್ದದ ಕಡ್ಡಿಗಳು ಅಗರ ಬತ್ತಿ ಎಂದು ಕಲ್ಲಿನ ಚೌಕಾರದ ತುಂಡನ್ನು ಸೋಪು ಎಂದು, ಎರಡು ತರಹದ ಮಣ್ಣುಗಳನ್ನು ಗೋಧಿಹಿಟ್ಟು, ಕಾಫಿಪುಡಿ, ರಾಗಿಹಿಟ್ಟು ಎಂದು ಇಟ್ಟಿಗೆಯ ದೊಡ್ಡ ಚೂರುಗಳನ್ನು ಬೆಲ್ಲ ಎಂದು ಹಾಗೇ ಅರಳಿ ಮರದ ಎಲೆಗಳನ್ನು ವಿಳ್ಯದ ಎಲೆ ಎಂದು ಸಣ್ಣ ಸಣ್ಣ ಕಲ್ಲುಗಳನ್ನು ಅಡಿಕೆ ಎಂದು, ಅಲ್ಲದೆ ತಮ್ಮ ತಮ್ಮ ಮನೆಗಳಿಂದ ಉಪ್ಪಿನಕಾಯಿ ಎಲ್ಲವನ್ನು ತಂದು ಇಟ್ಟಿರುತ್ತಾರೆ. ಅಲ್ಲದೇ ತೆಂಗಿನ ಎರಡು ಒಂದೇ ಸಮ ಇರುವ ಚಿಪ್ಪುಗಳನ್ನು ತೆಗೆದುಕೊಂಡು, ದಾರಕಟ್ಟಿ, ತಕ್ಕಡಿಯನ್ನು ಸಹ ಮಾಡಿಕೊಳ್ಳುತ್ತಾರೆ ಅಥವಾ ದಪ್ಪ ರಟ್ಟಿನ ಎರಡು ತುಂಡುಗಳನ್ನು ತೆಗೆದುಕೊಂಡು ವೃತ್ತಾಕಾರದಲ್ಲಿ ಕತ್ತರಿಸಿ ತೂಕ ಮಾಡಿಕೊಡುತ್ತಾರೆ. ಸಾಮಾನು ತೆಗೆದುಕೊಂಡವರು ಕಾಗದದ ಚೂರುಗಳನ್ನು ಹಣ ಎಂದು ಅಂಗಡಿಯವನಿಗೆ ನೀಡಿ ತಮಗೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಆಟ ಆಡುತ್ತಾರೆ.

**ಮದುವೆ ಆಟ:** ಈ ಆಟವನ್ನು ಗಂಡು ಹಾಗೂ ಹೆಣ್ಣುಮಕ್ಕಳು ಇಬ್ಬರು ಸೇರಿ ಆಡುವಂತ ಆಟವಾಗಿದೆ. ಇದರಲ್ಲಿ ಎರಡು ಕಡ್ಡಿಗಳನ್ನು ಅಥವಾ ಕಾಚಿಕಳ್ಳಿ ಗಿಡದ ರೆಂಬೆಗಳನ್ನು ಬಳಸಿ ವಧು ಮತ್ತು ವರ ಎಂದು ಮಾಡಿಕೊಂಡು ವಧುವಿಗೆ ಸೀರೆ, ಆಭರಣ, ಜಡೆ ಎಲ್ಲವನ್ನು ಹಾಕಿ ಶೃಂಗರ ಮಾಡಿಕೊಳ್ಳುವುದು ಹಾಗೆ ವರನಿಗೆ ಪಂಚೆ, ಶಲ್ಯ ಹಾಗೂ ಪೇಟವನ್ನು ಹಳೆಯ ಯಾವುದಾದರೂ ಬಟ್ಟೆಗಳಿಂದ ಮಾಡಿಕೊಂಡು ಶೃಂಗಾರ ಮಾಡುವುದು ಮತ್ತು ಮಕ್ಕಳೆಲ್ಲಾ ಎರಡು ಗುಂಪುಗಳನ್ನು ಮಾಡಿಕೊಂಡು ಹೆಣ್ಣಿನ ಕಡೆಯವರು ಹಾಗೂ ಗಂಡಿನ ಕಡೆಯವರು ಎಂದು ವಿಂಗಡಿಸಿಕೊಂಡು ಸಣ್ಣ ಸಣ್ಣ ಮರದ ಕೊಂಬೆಗಳನ್ನು ತೆಗೆದುಕೊಂಡು ಚಪ್ಪರವನ್ನು ಹಾಕಿಕೊಂಡು, ಹಾಗೇ ತಮ್ಮ ತಮ್ಮ ಮನೆಗಳಲ್ಲೆ ಸಿಗುವಂತ ಅಕ್ಕಿ, ಬೆಲ್ಲ, ಸಕ್ಕರೆ, ತೆಂಗಿನಕಾಯಿ ಚೂರು ಅಥವಾ ಕೊಬ್ಬರಿ ಚೂರುಗಳು ಅಲ್ಲದೆ ತಮಗೆ ಇಷ್ಟ ಬಂದ ಪದಾರ್ಥಗಳನ್ನು ಸಹ ತರಬಹುದು. ಅಲ್ಲದೇ, ಕಾಚಿಕಳ್ಳಿ ಗಿಡದ ಎಲೆ, ಕಾಯಿ, ಅರಳಿಎಲೆ, ಸಣ್ಣಸಣ್ಣ ಕಲ್ಲು (ಅಡಿಕೆ) ಹೀಗೆ ಎಲ್ಲವನ್ನು ಉಪಯೋಗಿಸಿಕೊಂಡು ಮದುವೆಯ ಆಟವನ್ನು ಆಡುತ್ತಾರೆ. ಅಲ್ಲದೇ, ಇದರಲ್ಲಿ ಗಂಡಿನ ಕಡೆಯವರು ಹಾಗೂ ಹೆಣ್ಣಿನ ಕಡೆಯವರು ಸೇರಿಕೊಂಡು ಮುದುವೆ ಮುಗಿದ ಮೇಲೆ ನೀರು ಎರಚಿಕೊಂಡು ಅಂದರೆ ಹೆಣ್ಣಿನವರಿಗೆ ಗಂಡಿನ ಕಡೆಯವರು ಹಾಗೆ ಗಂಡಿನ ಕಡೆಯವರಿಗೆ ಹೆಣ್ಣಿನ ಕಡೆಯವರು ನೀರು ಎರಚಿ ಸಂತೋಷಪಡುವರು.

**ಡಾಕ್ಟರ್ ಆಟ:** ಇದನ್ನು ಸಹ ಹೆಣ್ಣುಮಕ್ಕಳು ಹಾಗೂ ಗಂಡುಮಕ್ಕಳು ಇಬ್ಬರು ಸಹ ಆಡುವಂಥ ಆಟವಾಗಿದೆ. ಇದರಲ್ಲಿ ಒಬ್ಬರು ಡಾಕ್ಟರು ಆಗುತ್ತಾರೆ. ಹಾಗೆ ಕೆಲವು ಮಕ್ಕಳು ರೋಗಿಗಳಾಗಿ, ಮತ್ತೆ ಕೆಲವರು ಅವರಿಗೆ ಪೋಷಕರಾಗಿ ಪಾತ್ರ ವಹಿಸುತ್ತಾರೆ. ಒಂದು ಮಗುವನ್ನು ರೋಗಿ ಎಂದು ಡಾಕ್ಟರ್ ಹತ್ತಿರ ಕರೆದುಕೊಂಡು (ಅಪ್ಪ ಅಥವಾ ಅಮ್ಮನ ಪಾತ್ರ ಮಾಡಿದವರು) ಹೋಗುವುರು, ಆಗ ನಮ್ಮ ಮಗುವಿಗೆ ಹೊಟ್ಟೆನೋವು ಡಾಕ್ಟ್ರೆ ಎಂದು ಹೇಳುವುದು, ಆಗ ಡಾಕ್ಟರು ಮಾತ್ರೆ ಅಂತ ಬೇಳೆಕಾಳನ್ನು ಸಣ್ಣ ಮಾತ್ರೆ ಎಂದೂ, ಕೆಲವು ಸಣ್ಣಸಣ್ಣ ಕಲ್ಲು ಹಾಗೇ ಬಿಳಿ ಅಲಸಂದೆ ಕಾಳುಗಳನ್ನು ದೊಡ್ಡ ಮಾತ್ರೆ ಎಂದು ಕೊಡುವುರು. ಹಾಗೇ ಒಂದು ಕಡ್ಡಿ ಅಥವಾ ನಿಂಬೆಗಿಡದ ಮುಳ್ಳುಗಳನ್ನು ತೆಗೆದುಕೊಂಡು ಇಂಜೆಕ್ಷನ್ ಎಂದು ಚುಚ್ಚುವುದು, ಆಮೇಲೆ ಡಾಕ್ಟರ್‌ಗೆ ದುಡ್ಡು ಎಂದು ಕೆಲವು ಕಾಗದದ ಚೂರುಗಳನ್ನು ಕೊಡುವುದು, ಇಲ್ಲವೆ ನಮ್ಮ ಹತ್ತಿರ ನಾಣ್ಯಗಳಿದ್ದರೆ ಅವುಗಳನ್ನು ಸಹ ಕೊಡುವುದು ಕಂಡುಬರುತ್ತದೆ.

**ಅಡಿಗೆ ಆಟ:** ಈ ಆಟವನ್ನು ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳು ಕೂಡಿ ಆಡುವ ಆಟವಾಗಿದೆ. ಹಾಗೇ ಬರೀ ಹೆಣ್ಣು ಮಕ್ಕಳು ಕೂಡ ಈ ಆಟವನ್ನು ಆಡುತ್ತಾರೆ ಈ ಆಟಕ್ಕೆ ಕೆಲವು ಆಟಿಕೆಸಾಮಾನು ಬೇಕು. ಯಾವುವೆಂದರೆ ತೆಂಗಿನ ಚಿಪ್ಪು, ಸಣ್ಣ ಸಣ್ಣ ಕಡ್ಡಿಗಳು, ಯಾವುದಾದರೂ ಪ್ಲಾಸ್ಟಿಕ್ ಆಟಿಕೆಗಳು ( ಡಬ್ಬ, ಚಮಚ) ಇತ್ಯಾದಿ. ಮೊದಲು ಯಾವುದಾದರು ಒಂದು ಜಾಗವನ್ನು ಆಟಕ್ಕೆ ಆಯ್ಕೆ ಮಾಡುತ್ತಾರೆ. ಮನೆಯ ಜಗುಲಿ, ಹಿತ್ತಲು ಹೀಗೆ ಆ ಜಾಗವನ್ನು ಶುದ್ಧವಾಗಿ ಗುಡಿಸಿ ಸಗಣಿಯಿಂದ ಸಾರಿಸಿ, ರಂಗೋಲಿ ಹಾಕಿ ಅಲಂಕಾರ ಮಾಡುತ್ತಾರೆ, ನಂತರ ಮೂರು ಸಣ್ಣ ಸಣ್ಣ ಕಲ್ಲುಗಳನ್ನು ತಂದು ಅಂದರೆ ತೆಂಗಿನ ಚಿಪ್ಪು ಕೂರುವ ಅಳತೆಯ ಕಲ್ಲುಗಳನ್ನು ತಂದು ಒಲೆ ಹಾಕುತ್ತಾರೆ. ಸಣ್ಣ ಸಣ್ಣ ಕಡ್ಡಿಗಳನ್ನು ಸೌದೆ ಎಂದು ಉಪಯೋಗಿಸುತ್ತಾರೆ. ಅದರ ಮೇಲೆ ತೆಂಗಿನ ಚಿಪ್ಪನ್ನು ಇಡುತ್ತಾರೆ.ಅದಕ್ಕೆ ಬೇಲಿಯಲ್ಲಿ ಸಿಗುವ ಸೊಪ್ಪುಗಳನ್ನು ತಂದು ಅರೆದು ಅದರ ರಸವನ್ನು ತೆಂಗಿನ ಚಿಪ್ಪಿಗೆ ಹಾಕಿ ಸಾಂಬಾರು ತಯಾರಿಸುತ್ತಾರೆ. ಇನ್ನೊಂದು ಒಲೆಯನ್ನು ಹಾಕಿ ತೆಂಗಿನ ಚಿಪ್ಪಿಗೆ ಮಣ್ಣು ತುಂಬಿ ಅನ್ನ ತಯಾರಿಸುತ್ತಾರೆ. ಹಾಗೇ ಕಾಡು ಜಾತಿಯ ಗಿಡಗಳ ಬೀಜಗಳನ್ನು ಕಾಳುಗಳೆಂದು ಬಳಸುತ್ತಾರೆ. ನಂತರ ಎಲ್ಲ

ಮಕ್ಕಳು ಸೇರಿ ಸಾಲಾಗಿ ಕುಳಿತುಕೊಳ್ಳುತ್ತಾರೆ ಬೇಲಿಯಲ್ಲಿ ಸಿಗುವ ದೊಡ್ಡ ದೊಡ್ಡ ಎಲೆಗಳನ್ನು ತಂದು ಎಲ್ಲರಿಗೂ ತಟ್ಟೆ ಎಂದು ಇಟ್ಟು ಊಟ ಬಡಿಸುತ್ತಾರೆ. ಅಡಿಗೆ ಆಟಕ್ಕೆ ಸೇರುವ ಮಕ್ಕಳು ತಮ್ಮ ಮನೆಗಳಿಂದ ಏನಾದರೂ ತಿನ್ನುವ ಪದಾರ್ಥವನ್ನು ತರುತ್ತಾರೆ. ಅಂದರೆ ಬೆಲ್ಲ ಸಕ್ಕರೆ, ಕೊಬ್ಬರಿ,ಉಪ್ಪಿನಕಾಯಿ,ತೆಂಗಿನಕಾಯಿ, ಸಿಹಿತಿಂಡಿಗಳು,ಅವಲಕ್ಕಿ ಬಿಸ್ಕೆಟ್ ಇತ್ಯಾದಿ. ಅವೆಲ್ಲವನ್ನು ಎಲ್ಲ ಮಕ್ಕಳು ಹಂಚಿಕೊಂಡು ತಿಂದು ಅಡಿಗೆ ಆಟವನ್ನು ಮುಕ್ತಾಯ ಮಾಡುತ್ತಾರೆ. ನಂತರ ಆಟ ಮುಗಿದ ಮೇಲೆ ಆಟಕ್ಕೆ ಬಳಸಿದ ವಸ್ತುಗಳನ್ನು ಯಾರಾದರು ಒಬ್ಬರು ಜೋಪಾನವಾಗಿ ಅವರ ಮನೆಯಲ್ಲಿ ಇಟ್ಟುಕೊಳ್ಳಬೇಕು, ಮತ್ತೆ ಅಡಿಗೆ ಆಟ ಆಡುವಾಗ ತರಬೇಕು. ಸ್ವಲ್ಪ ದೊಡ್ಡ ಮಕ್ಕಳಾದರೆ ನಿಜವಾಗಿ ಅನ್ನ ಸಾಂಬಾರ್ ಅಥವಾ ಚಿತ್ರಾನ್ನ ಮಾಡಿ ಕೂಡ ಆಟ ಆಡುತ್ತಾರೆ.

**ಕಳ್ಳ ಪೋಲೀಸ್ ಆಟ:** ಮೊದಲಿಗೆ ಈ ಆಟವನ್ನು ಎರಡು ಗುಂಪುಗಳಾಗಿ ಮಾಡಿ ಆಡುವರು. ಅದರಲ್ಲಿ ಒಂದು ಗುಂಪಿನವರು ಕಳ್ಳರಾದರೆ ಮತ್ತೊಂದು ಗುಂಪಿನವರು ಪೋಲಿಸರಾಗುತ್ತಾರೆ. ಆಟ ಪ್ರಾರಂಭವಾದಾಗ ಕಳ್ಳರ ಗುಂಪಿನವರು ಎಲ್ಲರೂ ಹೋಗಿ ಬೇರೆ ಬೇರೆ ಭಾಗದಲ್ಲಿ ಅವಿತುಕೊಳ್ಳುತ್ತಾರೆ.



ಅವಿತುಕೊಂಡ ಅವರನ್ನು ಹಿಡಿಯುವುದೇ ಪೋಲಿಸರ ಕೆಲಸ. ಪೋಲಿಸರು ಒಬ್ಬೊಬ್ಬರಾಗಿ ಹಿಡಿದ ಕಳ್ಳರನ್ನು ಕರೆತಂದು ತಾವು ಜೈಲು ಎಂದು ನಿರ್ಧರಿಸಿಕೊಂಡ ಜಾಗದಲ್ಲಿ ಅವರನ್ನು ಕೂಡಿಸುತ್ತಾರೆ. ಅವರನ್ನು ಇಬ್ಬರು ಪೋಲಿಸರು ತಪ್ಪಿಸಿಕೊಳ್ಳದಂತೆ ಕಾವಲು ಕಾಯುತ್ತಾರೆ. ಹೀಗೇ ಎಲ್ಲ ಕಳ್ಳರನ್ನು ಹಿಡಿಯುವವರೆಗೂ ಆಟ ಮುಂದುವರೆದು ಎಲ್ಲರನ್ನೂ ಹಿಡಿದಾಗ ಆಟ ಮುಕ್ತಾಯವಾಗುತ್ತದೆ. ನಂತರ ಪೋಲಿಸರು ಕಳ್ಳರಾಗಿ ಕಳ್ಳರೆಲ್ಲರೂ ಪೋಲಿಸರಾಗಿ ಮತ್ತೆ ಆಟ ಮುಂದುವರೆಸಿ ಮೇಲಿನಂತೆ ಎಲ್ಲರನ್ನು ಹಿಡಿದ ನಂತರ ಆಟ ಮುಕ್ತಾಯವಾಗುತ್ತದೆ.

**ಹುಲಿ ಹಸು ಆಟ:** ಈ ಆಟವನ್ನು ಹಿಂದೆ ಮಲೆನಾಡು ಪ್ರದೇಶಗಳಲ್ಲಿ ಹುಲಿಗಳು ಗ್ರಾಮಗಳಿಗೆ ಬಂದಾಗ ಹಸುವನ್ನು ರಕ್ಷಿಸಿಕೊಳ್ಳಲು ಜನರು ಮಾಡುತ್ತಿದ್ದ ಅನೇಕ ರೀತಿಯ ತಂತ್ರಗಳಲ್ಲಿ ಕೆಲವೊಂದು ತಂತ್ರವನ್ನು ಅಳವಡಿಸಿಕೊಂಡು ಈ ಆಟ ಪ್ರವರ್ಧಮಾನಕ್ಕೆ ಬಂತು ಎಂಬ ನಂಬಿಕೆಯ ಇತಿಹಾಸ ಇದೆ. (೪) ಈ ಆಟವನ್ನು ಆಡಲು ಹೆಚ್ಚು ಜನರಿದ್ದರೆ ಬಹಳ ಚೆನ್ನಾಗಿರುವುದು. ಆಟ ಪ್ರಾರಂಭಿಸುವ ಮೊದಲು ಆಟದಲ್ಲಿ ಭಾಗವಹಿಸುವವರು ಒಂದು ವರ್ತುಲಾಕಾರದಲ್ಲಿ ಕೋಟೆಯಂತೆ ಒಬ್ಬೊಬ್ಬರ ಕೈಯನ್ನು ಒಬ್ಬೊಬ್ಬರು ಹಿಡಿಯುತ್ತಾ ವರ್ತುಲದ ಬೇಲಿಯನ್ನು ಗಡಿಭಾಗ ಎಂದು ರಚಿಸಿಕೊಳ್ಳಬೇಕು. ನಂತರ ಅವರಲ್ಲಿ ಒಬ್ಬರನ್ನು ಹಸುವೆಂದು, ಇನ್ನೊಬ್ಬರನ್ನು ಹುಲಿಯೆಂದು ತೀರ್ಮಾನಿಸಿಕೊಳ್ಳಬೇಕು. ಬೇಲಿಯನ್ನು ನಿರ್ಮಿಸಿಕೊಂಡಿರುವವರ ಒಳಗೆ ಹಸುವನ್ನು ಬಿಟ್ಟುಕೊಳ್ಳಬೇಕು. ಹುಲಿಯನ್ನು ವರ್ತುಲದ ಹೊರಗೆ ನಿಲ್ಲಿಸಬೇಕು. ನಂತರ ಆಟ ಪ್ರಾರಂಭಿಸಬೇಕು, ಈಗ ಬೇಲಿಯ ಒಳಗೆ ಇರುವ ಹಸುವಿನ ಪಾತ್ರಧಾರಿಯನ್ನು ಹಿಡಿಯಲು ಹುಲಿ ಪಾತ್ರಧಾರಿಯು ಬೇಲಿಯ ಹೊರನಿಂತು ಹಿಡಿಯಲು ಪ್ರಯತ್ನಿಸುವರು. ಆದರೆ ಬೇಲಿ ನಿರ್ಮಿಸಿರುವವರು ಹುಲಿಯನ್ನು ಬೇಲಿಯ ಒಳಗೆ ಪ್ರವೇಶಿಸದಂತೆ ಕೈಗಳನ್ನು ಗಟ್ಟಿಯಾಗಿ ಹಿಡಿದು ತಡೆಯಬೇಕು.



ಒಂದು ವೇಳೆ ಹುಲಿ ಆ ಬೇಲಿಯನ್ನು ದಾಟಲು ಯಶಸ್ವಿಯಾಗಿ ಹಸುವನ್ನು ಹಿಡಿಯಲು ಹೋದರೆ ಬೇಲಿ ಕಟ್ಟಿಕೊಂಡಿರುವವರು ಹಸುವನ್ನು ಬೇಲಿದಾಟಿ ಓಡಲು ಅನುವು ಮಾಡಿಕೊಡಬಹುದು. ಆದರೆ ಹುಲಿ ಮಾತ್ರ ದಾಟದಂತೆ ತಡೆಯಬೇಕು. ಈ ಎಲ್ಲಾ ಅಡೆ ತಡೆಗಳನ್ನು ಹುಲಿ ದಾಟಿ ಹಸುವನ್ನು ಹಿಡಿದರೆ ಹುಲಿಯಾದವನು ವಿಜಯಶಾಲಿಯಾಗುವನು. ಒಂದು ವೇಳೆ ಹಿಡಿಯಲು ಆಗದೇ ಸುಸ್ತಾಗಿ ಸೋಲೊಪ್ಪಿಕೊಂಡರೆ ಹಸು ಗೆದ್ದಂತೆ. ಹೀಗೆ ಆಟವು ಮುಂದುವರೆಯುವುದು.

**ಕಪ್ಪೆ ಆಟ:** ಮೊದಲಿಗೆ ಈ ಆಟದಲ್ಲಿ ಭಾಗವಹಿಸುವವರನ್ನು ಎರಡು ಗುಂಪುಗಳನ್ನಾಗಿ ಮಾಡಿ ಆ ಗುಂಪುಗಳಿಗೆ ಯಾವುದಾದರೂ ಹೆಸರನ್ನು ಕೊಡಬೇಕು. ನಂತರ ಅವರನ್ನು ಉದ್ದಕ್ಕೆ ನಿಲ್ಲಿಸಿ, ಎರಡು ತಂಡಗಳ ಮಧ್ಯ ಸ್ವಲ್ಪ ಅಂತರವಿರುವಂತೆ ಮಾಡಿ, ಅವರ ಮುಂದೆ ಒಂದು ಸಮಾಂತರ ಗೆರೆಯನ್ನು ಎಳೆಯಬೇಕು.



ಪ್ರಾರಂಭಿಕರು ಸೂಚನೆ ನೀಡಿದ ತಕ್ಷಣ ಕಪ್ಪೆಕೂರುವಂತೆ ಕುಳಿತುಕೊಂಡು ಕುಪ್ಪುತ್ತಾ ಹೋದಂತೆ ಮುಂದೆ ಸ್ವಲ್ಪ ಅಂತರದಲ್ಲಿ ಇಟ್ಟಿರುವ ಚೆಂಡು ಅಥವಾ ಡಂಬಲ್ಸ್ ಅನ್ನು ಸುತ್ತಿ ಪುನಃ ತಮ್ಮ ಸ್ಥಳಕ್ಕೆ ಬರಬೇಕು. ಸ್ಥಳಕ್ಕೆ ಧಾವಿಸಿದಂತೆ ಅವರ ಹಿಂದೆ ಇದ್ದಂತಹವರು ಇದೇ ಕ್ರಮವನ್ನು ಅನುಸರಿಸಬೇಕು.ಇದರಲ್ಲಿ ನಿಧಾನಕ್ಕೆ ಬಂದಂತಹ ಮಕ್ಕಳು ಸೋತಂತೆ ಲೆಕ್ಕವಾಗುತ್ತದೆ. ಬೇಗ ಬಂದು ತಮ್ಮ ಸ್ಥಳ ಸೇರಿದ ಮಕ್ಕಳ ತಂಡ ವಿಜಯಶಾಲಿಯಾಗುತ್ತದೆ. ಈ ಆಟವನ್ನು ತಂಡವಲ್ಲದೇ ವೈಯುಕ್ತಿಕವಾಗಿಯು ಇದೇ ನಿಯಮ ಅನುಸರಿಸಿಕೊಂಡು ಆಡಬಹುದು.

**ಬಸ್ ಆಟ:** ಗ್ರಾಮೀಣ ಭಾಗದ ಮಕ್ಕಳು ತಮ್ಮ ಸೃಜನಶೀಲ ಕಲ್ಪನೆಯಲ್ಲಿ ಒಂದು ಬಳ್ಳಿಯಿಂದ ಬಸ್ ತಯಾರಿಸಿಕೊಂಡು ಆಡುವ ಆಟವಾಗಿದೆ. ತಮ್ಮ ಪರಿಸರದಲ್ಲಿ ಬೆಳೆಯುವ ಬಳ್ಳಿ ಅಥವಾ ಅಂಬು ಎಂದು ಕರೆಯುವ ಒಂದು ಜಾತಿಯ ಸಸ್ಯದ ಭಾಗವನ್ನು ತೆಗೆದುಕೊಂಡು ಅದರಲ್ಲಿ ಒಂದರ ತುದಿಗೆ ಮತ್ತೊಂದು ತುದಿಯನ್ನು ಕಟ್ಟಿಕೊಂಡು ಅದನ್ನು ಬಸ್ ಅಂದುಕೊಳ್ಳುವರು.



ನಂತರ ಅದಕ್ಕೆ ಒಬ್ಬ ಮುಂದೆ ನಿಂತುಕೊಂಡು ನಿರ್ದಿಷ್ಟ ಜಾಗಕ್ಕೆ ಒಂದು ಊರಿನ ಹೆಸರನ್ನಿಟ್ಟು ತಾವೇ ತಮ್ಮ ಕಲ್ಪನೆಯಲ್ಲಿ ರಚಿಸಿಕೊಂಡಿರುವ ಬಸ್‌ನಿಲ್ದಾಣಕ್ಕೆ ಓಡಿ ಬಂದು ಆ ಬಳ್ಳಿಯೊಂದಿಗೆ ನಿಲ್ಲುವರು ಆಗ ನಿರ್ವಾಹಕನು ತಮ್ಮ ಬಸ್ಸು ಹೋಗುವ ಊರಿನ ಹೆಸರನ್ನು ಜೋರಾಗಿ ಕೂಗುವನು. ಅವನು ಕೂಗಿದ ಸ್ಥಳಕ್ಕೆ ಹೋಗಬೇಕಾಗಿರುವವರು ಆ ಬಳ್ಳಿಯೊಳಗೆ ಬಂದು ಸೇರುವರು. ಅಲ್ಲಿಂದ ಬಸ್ಸು ಹೊರಟು ತಾವೇ ಕಲ್ಪಿಸಿಕೊಂಡ ನಿರ್ದಿಷ್ಟ ದೂರಕ್ಕೆ ಓಡಿ ಬಂದು ನಿಲ್ಲಿಸುವರು. ಮತ್ತು ಪ್ರಯಾಣಿಕರಿಂದ ಗಿಡದ ಎಲೆಗಳನ್ನು ದುಡ್ಡು ಎಂಬಂತೆ ಕೇಳಿಕೊಳ್ಳುವರು. ಹೀಗೆ ಮುಂದೆ ಪ್ರವಾಸಿ ಸ್ಥಳಕ್ಕೆಂದು ಅನೇಕ ಕಲ್ಪನಾ ಲೋಕದಲ್ಲಿ ತಾವೇ ನಿರ್ದಿಷ್ಟ ಜಾಗವನ್ನು ನಿರ್ದಿಷ್ಟ ಊರೆಂದು ಸೃಜಿಸಿಕೊಂಡು ಈ ಆಟವನ್ನು ಆಡುವರು.

**ದೇವರ ಆಟ:** ಈ ಆಟವನ್ನು ಗಂಡು ಹಾಗೂ ಹೆಣ್ಣು ಮಕ್ಕಳಿಬ್ಬರೂ ಆಡುವಂತ ಅಟವಾಗಿದೆ. ಈ ಆಟವು ರಜಾದಿನಗಳಲ್ಲಿ ಮಕ್ಕಳು ಆಡುವಂತ ಆಟವಾಗಿದೆ. ಮೊದಲು ಈ ಆಟವಾಡಲು ಮಕ್ಕಳು ಒಂದು ನಿಗದಿತ ಸ್ಥಳವನ್ನು ಆಯ್ಕೆಮಾಡಿಕೊಳ್ಳುತ್ತಾರೆ. ಮನೆಯ ಜಗುಲಿ, ಹಿತ್ತಲು ಇಲ್ಲವೇ ಎರಡು ಮನೆಗಳ ಮಧ್ಯಭಾಗದ ಜಾಗವನ್ನು ಆಯ್ಕೆಮಾಡಿಕೊಂಡು ಆ ಸ್ಥಳವನ್ನು ಶುಭ್ರವಾಗಿ ಗುಡಿಸಿ ಸಗಣಿ ದೇವರಮೂರ್ತಿ ಇಲ್ಲವೇ ದೇವರ ಚಿತ್ರಪಟವನ್ನು ಮಧ್ಯಭಾಗದಲ್ಲಿ ಇಟ್ಟು ಅದಕ್ಕೆ ಅರಿಶಿಣ ಕುಂಕುಮ ಹಚ್ಚಿ , ತಮ್ಮ ಮನೆಯ ಸುತ್ತಮುತ್ತ ಸಿಗುವ ಹೂಗಳಿಂದ ಅಲಂಕಾರ ಮಾಡುತ್ತಾರೆ. ನಂತರ ಒಬ್ಬ ಹುಡುಗ ಪೂಜಾರಿಯಾಗುತ್ತಾನೆ. ಉಳಿದ ಮಕ್ಕಳು ಭಕ್ತಾದಿಗಳಾಗುತ್ತಾರೆ, ನಂತರ ಪೂಜೆ ಆಟ ಪ್ರಾರಂಭ ಮಾಡುತ್ತಾರೆ. ಬೇಲಿಗಳಲ್ಲಿ ಸಿಗುವ ದೊಡ್ಡ ಎಲೆಗಳನ್ನು ಎಲೆ ಎಂದು, ಕಲ್ಲನ್ನು ಅಡಿಕೆ ಎಂದು, ಕಡ್ಡಿಗಳನ್ನು ಅಗರಬತ್ತಿ ಎಂದು ಇಟ್ಟು ಆಟ ಪ್ರಾರಂಭಿಸುತ್ತಾರೆ. ಅಲ್ಲದೇ ತಮ್ಮ ಮನೆಗಳಿಂದ ತಂದ ತೆಂಗಿನಕಾಯಿ, ಬೆಲ್ಲ, ಅವಲಕ್ಕಿ ,ಹುರಿಗಡಲೆ,ಸಕ್ಕರೆ ಏನಾದರೂ ಸರಿ ಆಟಕ್ಕೆ ಬರುವ ಮಕ್ಕಳು ತರಲೇಬೇಕು. ಹೀಗೆ ತಂದ ತಿನಿಸುಗಳನ್ನು ದೇವರಿಗೆ ನೈವೇದ್ಯ ಇಟ್ಟು ಅದನ್ನೆ ಪ್ರಸಾದವಾಗಿ ಸ್ವೀಕರಿಸುತ್ತಾರೆ. ನಂತರ ದೇವರಮೂರ್ತಿಯನ್ನು ತಾವು ಆಟವಾಡುವ ಸ್ಥಳದಲ್ಲಿ ಇಲ್ಲ ಇಡೀ ಬೀದಿಯಲ್ಲಿ ಮೆರವಣಿಗೆ ಮಾಡಿಕೊಂಡು ಸಂತೋಷಪಡುತ್ತಾರೆ. ಹೀಗೆ ಆಟ ಮುಕ್ತಾಯವಾಗುತ್ತದೆ.

**ಟೀಚರ್ ಆಟ:** ಈ ಆಟವು ಗಂಡು ಹಾಗೂ ಹೆಣ್ಣು ಮಕ್ಕಳಿಬ್ಬರೂ ಕೂಡಿ ಆಡುವಂತ ಆಟವಾಗಿದೆ, ಇಲ್ಲವೆ ಬರೀ ಹೆಣ್ಣುಮಕ್ಕಳು ಕೂಡ ಆಡುತ್ತಾರೆ. ಈ ಆಟದಲ್ಲಿ ಒಂದು ಹೆಣ್ಣು ಮಗು ಟೀಚರ್ ಆಗುತ್ತಾಳೆ. ಅಲ್ಲದೇ ಆ ಹುಡುಗಿ ಟೀಚರ್‌ತರ ಅಲಂಕಾರ ಮಾಡಿಕೊಳ್ಳುತ್ತಾಳೆ. ಅಂದರೆ ದುಪ್ಪಟವನ್ನು ಸೀರೆಯ ತರಹ ಉಟ್ಟುಕೊಂಡು ಕೈಯಲ್ಲಿ ಒಂದು ಕೋಲು ಹಾಗೂ ಒಂದು ಪುಸ್ತಕವನ್ನು ಹಿಡಿದುಕೊಂಡು ಬರುತ್ತಾಳೆ. ಉಳಿದ ಮಕ್ಕಳು ವಿದ್ಯಾರ್ಥಿಗಳಾಗುತ್ತಾರೆ. ನಂತರ ಆಟ ಪ್ರಾರಂಭಿಸುತ್ತಾರೆ. ಮೊದಲು ಗಂಟೆ ಬಾರಿಸುತ್ತಾರೆ, ನಂತರ ಮಕ್ಕಳು ಹಾಗೂ ಟೀಚರ್ ಸೇರಿ ಶಾಲೆಯ ತರಹವೇ ಪ್ರಾರ್ಥನೆ ಮಾಡುತ್ತಾರೆ. ನಂತರ ಮಕ್ಕಳು ತರಗತಿಗೆ ಬಂದು ಕುಳಿತುಕೊಳ್ಳತ್ತಾರೆ.ಟೀಚರ್ ಹಾಜರಾತಿ ತೆಗೆದುಕೊಳ್ಳುತ್ತಾರೆ,ನಂತರ ಟೀಚರ್ ಮಕ್ಕಳಿಗೆ ಕೊಟ್ಟ ಮನೆಕೆಲಸ ನೋಡುತ್ತಾರೆ. ನಂತರ ಟೀಚರ್ ಮಕ್ಕಳಿಗೆ ಪಾಠ, ಹಾಡು, ಕಥೆ ಹೇಳಿಕೊಡುತ್ತಾರೆ. ಹೀಗೆ ಟೀಚರ್ ಆಟ ಮುಂದುವರಿಯುತ್ತದೆ.

**ರೈಲು ಆಟ:** ಈ ಆಟವನ್ನು ಗಂಡುಮಕ್ಕಳು ಮತ್ತು ಹೆಣ್ಣು ಮಕ್ಕಳು ಇಬ್ಬರೂ ಸೇರಿ ಆಡುವ ಆಟವಾಗಿದೆ. ಈ ಆಟವನ್ನು ಯಾವಾಗ ಬೇಕಾದರೂ ಮನೆಯಂಗಳ, ಊರ ರಸ್ತೆ, ಬಯಲಿನಲ್ಲಿ ಆಡಬಹುದು. ಈ ಆಟವನ್ನು ೫ ರಿಂದ ೨೦ರ ಸಂಖ್ಯೆಯಲ್ಲಿ ಮಕ್ಕಳು ಗುಂಪಾಗಿ ಈ ಆಟವನ್ನು ಆಡಲು ಬಯಸುತ್ತಾರೆ. ಆಟಗಾರರೆಲ್ಲರೂ ಸೇರಿ ಒಬ್ಬರ ಭುಜವನ್ನು ಮತ್ತೊಬ್ಬರು ತಮ್ಮ ಕೈಗಳಿಂದ ಹಿಡಿದುಕೊಂಡು ಸಾಲಾಗಿ ಕುದುರೆಯಂತೆ ಕುಕ್ಕರಲು ಓಟದಲ್ಲಿ ಓಡುತ್ತಿರುತ್ತಾರೆ. ಮುಂದಿರುವವನು ಚಾಲಕನಾಗಿರುತ್ತಾನೆ. ಚಾಲಕನಾದವನು ತನ್ನ ಬಲಗೈ ಹೆಬ್ಬೆರಳು ಮತ್ತು ತೋರುಬೆರಳು ಮಧ್ಯೆ ಬಾಯಿಯನ್ನು ಇಟ್ಟು ಚುಕು. ಬುಕು ಎನ್ನುತ್ತಾನೆ ಆಗ ಅವನ ಹಿಂದೆ ಇದ್ದವರೆಲ್ಲರೂ ಚುಕುಬುಕು........... ಚುಕು ಬುಕು.......ಎಂದು ಹೇಳುತ್ತಾ ಚಾಲಕನನ್ನು ಹಿಂಬಾಲಿಸುತ್ತಾರೆ. ಚುಕ್ ಬುಕ್ ಚುಕ್ ಬುಕ್ ಎನ್ನುವ ಸದ್ದು ನಿರಂತರವಾಗಿರುತ್ತದೆ.

ಹೀಗೆ ಈ ಅನುಕರಣೆ ಆಟಗಳನ್ನು ಮಕ್ಕಳು ಆಡುವುದರಿಂದ ಅವರಿಗೆ ಸಾಮಾಜಿಕ ಪರಿಕಲ್ಪನೆ, ಸಮಾಜದ ಆಗುಹೊಗುಗಳು, ಸಮಾಜದ ನೈತಿಕತೆ, ಮೌಲ್ಯಗಳು, ಅಲ್ಲಿನ ಸಂಸ್ಕೃತಿ, ಸೃಜನಶೀಲ ಕಲ್ಪನೆಗಳು ಪರಿಚಯವಾಗುತ್ತವೆ. ಮಕ್ಕಳು ವ್ಯಾಪಾರ ವಹಿವಾಟಿನ ಪರಿಕಲ್ಪನೆ ಮೂಡಿಸಿಕೊಳ್ಳಲು ಅಂಗಡಿಯಂತಹ ಆಟವನ್ನು ಆಡುವುದು ಗೋಚರವಾಗುತ್ತದೆ. ಈ ಆಟದಿಂದ ಹಣಕಾಸು, ತೂಕ, ವಿವಿಧ ವಸ್ತುಗಳು ಇತ್ಯಾದಿಗಳ ಪರಿಚಯವಾಗಿ ವ್ಯವಹಾರಿಕ ಮೌಲ್ಯಗಳನ್ನು ತಿಳಿಯುತ್ತಾರೆ. ಕಪ್ಪೆ ಆಟದಲ್ಲಿ ಕಪ್ಪೆಯ ಸ್ವರೂಪದ ಪರಿಕಲ್ಪನೆಯನ್ನು ಮಾತ್ರ ಮಕ್ಕಳು ತಿಳಿಯುವುದಲ್ಲ, ಕಪ್ಪೆಯ ನಿಲುವಿನೊಂದಿಗೆ ಜಿಗಿದು ಓಡುವ ಸಾಮರ್ಥ್ಯ ಬೆಳೆಸಿಕೊಳ್ಳುತ್ತಾರೆ. ಹಾಗೆಯೇ ಕುದುರೆ ಕುಣಿತ ಆಟದಲ್ಲಿ ಕುಣಿತದ ಶೈಲಿಗನುಗುಣವಾಗಿ ಜಿಗಿತವನ್ನು ದೈಹಿಕವಾಗಿ ಮೇಳೈಸಿಕೊಂಡು ಆಡುವುದು ಕಂಡುಬರುತ್ತದೆ. ಹಾಗೂ ಕಾಂಗರೂ ಓಟದಂತಹ ಆಟಗಳಲ್ಲಿ ಕಾಂಗರೂ ನಿಲುವಿನ ಶೈಲಿಯನ್ನು ಅನುಕರಿಸಿ ಓಡುವ ಪರಿಕಲ್ಪನೆಯನ್ನು ಮಕ್ಕಳು ಹೊಂದುತ್ತಾರೆ. ಹುಲಿ-ಹಸು ಆಟದಿಂದ ಶಿಷ್ಟರ ರಕ್ಷಣೆ ಮಾಡಿ ದುಷ್ಟರ ಆಕ್ರಮಣವನ್ನು ತಡೆಯುವ ವಿಧಾನವು ಈ ಆಟದಿಂದ ಕಂಡುಬರುತ್ತದೆ. ಕ್ರೂರ ಪ್ರಾಣಿಗಳಿಂದ ಸಾಧು ಪ್ರಾಣಿಗಳನ್ನು ರಕ್ಷಿಸುವ ಉದ್ದೇಶದಿಂದ ಮಕ್ಕಳು ಈ ಆಟವನ್ನು ಅನುಕರಿಸಿ ಆಡುವುದು ಕಂಡುಬರುತ್ತದೆ. ಮಗುವಿಗೆ ತಮ್ಮ ಸಮಾಜದಲ್ಲಿ ಇರುವ ಸರಿ ಮತ್ತು ತಪ್ಪು,ಒಳಿತು ಮತು ಕೆಡುಕು ಇಂತಹ ಮೌಲ್ಯಗಳ ಪರಿಕಲ್ಪನೆ ಮೂಡುತ್ತದೆ. ತನ್ನ ಪರಿಸರದಲ್ಲಿನ ಸೇವಾತ್ಮಕ ವೃತ್ತಿಗಳಾದ ಪೋಲೀಸ್, ಶಿಕ್ಷಕ, ಡಾಕ್ಟರ್, ಡ್ರೈವರ್, ಇಂತಹ ಪಾತ್ರಗಳು ಪರಿಣಾಮಕಾರಿಯಾದ ಪ್ರಭಾವ ಬೀರುವುದನ್ನು ಕಾಣಬಹುದಾಗಿದೆ. ಇಂತಹ ಆಟಗಳಲ್ಲಿ ಸಂಭಾಷಣೆಯ ಮೂಲಕ ಪಾತ್ರದ ಅನುಕರಣೆ ಚನ್ನಾಗಿ ನಡೆಯುತ್ತದೆ. ಶಿಕ್ಷಕ-ವಿದ್ಯಾರ್ಥಿಗಳೊಂದಿಗೆ, ಡ್ರೈವರ್ ಮತ್ತು ಕಂಡಕ್ಟರ್-ಪ್ರಯಾಣಿಕರೊಂದಿಗೆ, ಪೋಲೀಸ್-ಆಪಾದಿತ ವ್ಯಕ್ತಿಗಳೊಂದಿಗೆ, ಡಾಕ್ಟರ್-ರೋಗಿಗಳೊಂದಿಗೆ ಸಂಭಾಷಣೆ ಮಾಡುವುದು ಕಂಡುಬರುತ್ತದೆ. ಸಂಭಾಷಣೆಯಲ್ಲಿ ಅಲ್ಲಿನ ಭಾಷಾ ಸೊಗಡನ್ನು ಮಗು ಬಳಸಿಕೊಳ್ಳುವುದರಿಂದ ಅಲ್ಲಿನ ಭಾಷೆಯ ಪ್ರಾಮುಖ್ಯತೆ ಅರ್ಥವಾಗುತ್ತದೆ. ಹಾಗೆಯೇ ತಮ್ಮ ಕುಟುಂಬದಲ್ಲಿರುವ ಧಾರ್ಮಿಕ ಆಚರಣೆಗಳನ್ನು ಮದುವೆ ಮತ್ತು ದೇವರ ಆಟಗಳಲ್ಲಿ ಕಂಡುಕೊಳ್ಳುತ್ತಾರೆ. ಹೀಗೆ ಮಗುವಿನ

ಸಾಮಾಜೀಕರಣದ ಕೈಗನ್ನಡಿಯಾಗಿ ಅನುಕರಣೆಯ ಆಟಗಳು ಪ್ರಮುಖ ಪಾತ್ರ ವಹಿಸುತ್ತವೆ.

**ಗ್ರಂಥ ಋಣ**


1. Karl Buthler; The mental development of child.
2. Karl Buthler; The mental development of child.
3. ಡಾ: ಬಿ.ಎಸ್ ಗದ್ದಗಿಮಠ: ಕನ್ನಡ ಜಾನಪದ ಗೀತೆಗಳು.
4. ಡಾ.ನಿಂಗು ಸೊಲಗಿ (ಸಂಪಾದಕರು, ಕ.ಬಾ.ವಿ.ಅ.ಧರವಾಡ) : ಮಕ್ಕಳ ಜನಪದ ಆಟಗಳು.